ಅ) ಅರಣ್ಯ ಇಲಾಖೆಯಲ್ಲಿ ನೇರನೇಮಕಾತಿಯಾದ ಅರಣ್ಯ ಪಾಲಕರು ಎಷ್ಟು ಮತ್ತು ಬಡ್ತಿ ಮೇಲೆ ಅರಣ್ಯ ಪಾಲಕರಾದವರೆಷ್ಟು. ಬಡ್ತಿ ಮತ್ತು ನೇರ ನೇಮಕಾತಿ ಪಡೆದ ಅರಣ್ಯ ಪಾಲಕರು ಒಂದೇ ಜೇಷ್ಠತಾ ಪಟ್ಟಿಯಲ್ಲಿ ಬರಬೇಕಾದುದು ನ್ಯಾಯ ಸಮ್ಮತವಲ್ಲವೇ?

ಆ) ಬಡ್ತಿ ಮೂಲಕ ಅರಣ್ಯ ಪಾಲಕರಾದವರ ಜೇಷ್ಠತಾ ಪಟ್ಟಿ ಮತ್ತು ನೇರನೇಮಕಾತಿ ಮೂಲಕ ಅರಣ್ಯಪಾಲಕರಾದವರ ಜೇಷ್ಠತಾ ಪಟ್ಟಿ ಪ್ರತ್ಯೇಕವಾಗಿದೆಯೇ?

ಇ) ಜೇಷ್ಠತೆಯಲ್ಲಿ ಹಿರಿಯರಿದ್ದ ಬಡ್ತಿ ಮೂಲಕ ಬಂದ ಅರಣ್ಯ ಪಾಲಕರನ್ನು ಕಡೆಗಣಿಸಿ ಜೇಷ್ಠತೆಯಲ್ಲಿ ಕಿರಿಯರಿದ್ದ ನೇರ ನೇಮಕಾತಿ ಹೊಂದಿದ ಅರಣ್ಯ ಪಾಲಕರಿಗೆ ಬಡ್ತಿ ನೀಡಿರುವುದು ನಿಜವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ನೇರ ನೇಮಕಾತಿಯ ವನಪಾಲಕರು - 237

ಬಡ್ತಿಯ ಮೇಲೆ ವನಪಾಲಕರು - 1768

ಹೌದು

ಆ) ಇಲ್ಲ

ಇ) ವನಪಾಲಕರ ಜೇಷ್ಠತೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಲಾದ ಮಾರ್ಗಸೂಚಿಯಂತೆ ನೇರ ನೇಮಕಾತಿ ವನಪಾಲಕರ ಜೇಷ್ಠತೆಯನ್ನು ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಸಿದ್ದಪಡಿಸಲಾಗಿದೆ. ಅಂತೆಯೇ ಈ ಜೇಷ್ಠತಾ ಪಟ್ಟಿಯನ್ನು ಆಧಾರವಾಗಿಟ್ಟು ಕೊಂಡು ಜೇಷ್ಠತೆಯಲ್ಲಿ ಹಿರಿಯರಾದ ವನಪಾಲಕರಿಗೆ ವಲಯ ಅರಣ್ಯ ಅಧಿಕಾರಿಯಾಗಿ ಬಡ್ತಿ ನೀಡಲಾಗುತ್ತಿದೆ.

ಸಿರ್ಸಿ, ಯಲ್ಲಾಪುರ, ಅಂಕೋಲದಲ್ಲಿ ನರ್ಸರಿ ಶಾಲೆ ಪ್ರಾರಂಭಿಸಲು ಅನುಮತಿಗೆ ನಕಾರ.

1244 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರ್ಸರಿ ಶಾಲೆ ಪ್ರಾರಂಭಿಸಲು ಸರ್ಕಾರದ ಸೂತ್ರಗಳೇನು.

ಆ) ಇಂಗ್ಲೀಷ್ ಮಾಧ್ಯಮದ ನರ್ಸರಿ ಶಾಲೆ ತೆರೆಯುವ ಬಗ್ಗೆ ಸರ್ಕಾರದ ಯಾವುದಾದರೂ ನಿಬಂಧನೆಗಳು ಇವೆಯೇ.

ಇ) ಸಿರ್ಸಿ, ಯಲ್ಲಾಪುರ, ಅಂಕೋಲ ತಾಲ್ಲೂಕಿನಲ್ಲಿ ನರ್ಸರಿ ಶಾಲೆ (ಕನ್ನಡ ಇಂಗ್ಲೀಷ್) ತೆರೆಯಲು ಯಾವುದಾದರೂ ಪ್ರಸ್ತಾವನೆ ಬಂದಿದೆಯೇ (ತಾಲೂಕುವಾರು ವಿವರ ನೀಡುವುದು)?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪೂರ್ವ ಪ್ರಾಥಮಿಕ ಶಿಕ್ಷಣವು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯ್ದೆಯ ವ್ಯಾಪ್ತಿಗೆ ಒಳಪಡದಿರುವುದರಿಂದ, 1984-85ನೇ ಸಾಲಿನಿಂದ ಯಾವುದೇ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವುದನ್ನು ಹಾಗೂ ಈ ಶಾಲೆಗಳಿಲ್ಲಿ ಸಿಬ್ಬಂದಿ ನೇಮಕ ಮಾಡುವುದರ ಬಗ್ಗೆ ಅನುಮತಿ ನೀಡುವುದನ್ನು ನಿಲ್ಲಿಸಲಾಗಿದೆ.

ಅ) ಆಂಗ್ಲ ಮಾಧ್ಯಮ ನರ್ಸರಿ ಶಾಲೆಗಳನ್ನು ತೆರೆಯಲು ಯಾವ ನಿಬಂಧನೆಗಳೂ ಇಲ್ಲ ಹಾಗೂ ಅನುಮತಿಯನ್ನು ನೀಡುತ್ತಿಲ್ಲ.

ಇ) ಇಲ್ಲ.

ಉ.ಕ.ಜಿಲ್ಲೆಯಲ್ಲಿ ಟಿ.ಸಿ.ಹೆಚ್, ಬಿ.ಎಡ್. ಕಾಲೇಜ್ ಸ್ಥಾಪನೆ.

1243 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ಸಿ.ಹೆಚ್, ಬಿ.ಎಡ್.ಕಾಲೇಜು ಸ್ಥಾಪಿಸಲು ಸರ್ಕಾರದ ಸೂತ್ರಗಳೇನು?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಟಿ.ಸಿ.ಹೆಚ್., ಬಿ.ಎಡ್. ಕಾಲೇಜು ಸ್ಥಾಪಿಸುವ ಬಗ್ಗೆ ಹೊಸದಾಗಿ ಪ್ರಸ್ತಾವನೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರದ ಯೋಜನೆ ಇದೆಯೇ?

ಈ) ಹೊಸದಾಗಿ ಸದರಿ ಕಾಲೇಜು ಸ್ಥಾಪಿಸಲು ಪಾಸಗಿಯವರಿಗೆ ನೀಡುವ ಆಲೋಚನೆ ಇದೆಯೇ?

ಉ) ಹಾಗಿದ್ದಲ್ಲಿ, ಅದಕ್ಕೆ ಸರ್ಕಾರದ ನಿಬಂಧನೆಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) 1987ನೇ ಸಾಲಿನಲ್ಲಿ ತಜ್ಞರ ಸಮಿತಿಯು ನೀಡಿರುವ ವರದಿಯಲ್ಲಿನ ಶಿಫಾರಸ್ಸನ್ನು ಆಧರಿಸಿ 7ನೇ ಮತ್ತು 8ನೇ ಪಂಚವಾರ್ಷಿಕ ಯೋಜನಾವಧಿಯ ಅಂತ್ಯದವರೆಗೆ ಹೊಸ ಶಿಕ್ಷಣ ಕಾಲೇಜುಗಳ ಮತ್ತು ಟಿ.ಸಿ.ಹೆಚ್. ಸಂಸ್ಥೆಗಳ ಸ್ಥಾಪನೆಯ ಮೇಲೆ ನಿಷೇಧವಿದೆ. ಅದೂ ಅಲ್ಲದೆ, 1993ರ ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ತಿನ ಅಧಿನಿಯಮದ 14ನೇ ಪ್ರಕರಣದಡಿ ಅನುಮೋದನೆ ಪಡೆಯಬೇಕು.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಟಿ.ಸಿ.ಹೆಚ್, ಮತ್ತು ಬಿ.ಎಡ್, ಕಾಲೇಜುಗಳ ಸ್ಥಂಖ್ಯೆ.

892 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು ಎಷ್ಟ ಟಿ.ಸಿ.ಹೆಚ್. ಕಾಲೇಜುಗಳು ಹಾಗೂ ಬಿ.ಎಡ್. ಕಾಲೇಜುಗಳು ಇವೆ.

ಆ) ಇವುಗಳಲ್ಲಿ ಸರ್ಕಾರಿ ಅನುದಾನ ಪಡೆಯುತ್ತಿರುವ, ಅನುದಾನ ಪಡೆಯದ ಮತ್ತು ಅಲ್ಪಸಂಖ್ಯಾತರ ಸಂಸ್ಥೆಯ ಸಂಖ್ಯೆ ಎಷ್ಟು.

ಇ) ಇದರಲ್ಲಿ ಶೇಕಡ ಎಷ್ಟು ಸೀಟುಗಳಿಗೆ 'ಸರ್ಕಾರವು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಟಿ.ಸಿ.ಹೆಚ್. ಸಂಸ್ಥೆಗಳ ಸಂಖ್ಯೆ 131

ಬಿ.ಎಡ್. ಕಾಲೇಜುಗಳ ಸಂಖ್ಯೆ 65